

# ಮಾರಕ ತೃಷ್ಣೆ

ಅನು ಬೆಳ್ಳೆ

## ಬಾಟಲಿಯ ದಾಸನಾದ ಪಾಂಬು

ಕೇರಳದ ಸಮುದ್ರ ದಂಡೆಯಲ್ಲಿ ಸಾವು ಬದುಕಿನ ಜೊತೆಗೆ ಸಾಗಿದ್ದ ಅವನ ಬದುಕನ್ನು ಹಸನುಗೊಳಿಸಿದ್ದೇ ಮುತ್ತುಚಾಂಡಿ. ಅಂತಹ ಮುತ್ತುಚಾಂಡಿಯನ್ನು ಎದುರು ಹಾಕಿಕೊಳ್ಳುವಷ್ಟು ಮೂರ್ಖ ವ್ಯಕ್ತಿ ಪಾಂಬುವಲ್ಲ. ಶೆಲ್ಲಿಯ ಸಾವಿನ ಸುದ್ದಿ ಹೊತ್ತು ತಂದ ಕೇರಳ ಆರಕ್ಷಕರ ಗುರಿಯಿಂದ ತಪ್ಪಿಸಿ ಅವನನ್ನು ನಿಗೂಢ ಸ್ಥಳದಲ್ಲಿ ಬಚ್ಚಿಟ್ಟಿದ್ದು ಇದೇ ಮುತ್ತುಚಾಂಡಿ. ಈಗ ತನ್ನ ಮಾತು ನಡೆಸಿಕೊಡದ್ದಕ್ಕೆ ಅವನ ಬಳಿ ಬಿಸಿಬಿಸಿ ಮಾತನಾಡಿದ್ದೇ ಮುತ್ತುಚಾಂಡಿಯ ಜೊತೆಗೆ ದ್ವೇಷ ಕಟ್ಟಿಕೊಳ್ಳುವಂತಾಯಿತು. ಅವನನ್ನು ಒಪ್ಪಿಸುವ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜಕವಾದವು.

ಮುತ್ತುಚಾಂಡಿ ಪಟ್ಟು ಬಿಡಲಿಲ್ಲ. ಹಿತೇಶನನ್ನು ಪೊಲೀಸರಿಗೆ ಒಪ್ಪಿಸಿ ಕೈ ತೊಳೆದು ಕೊಳ್ಳುವಂತೆ ಪಾಂಬುಗೆ ಎಚ್ಚರಿಕೆ ನೀಡಿದ್ದ. ಅದನ್ನು ನಿರಾಕರಿಸಿ ಹಿತೇಶನನ್ನು ಒಪ್ಪಿಸದೆ ಹಣ ಗಳಿಸುವ ಸುಲಭವಾದ ಮಾರ್ಗವನ್ನು ಕಂಡುಕೊಂಡ. ಆದರೆ ಅದು ಅಷ್ಟೇ ಅಪಾಯಕಾರಿಯಾಗಿತ್ತು. ಜೊತೆಗೆ ಪೊಲೀಸರನ್ನು ಎದುರು ಹಾಕಿಕೊಳ್ಳಬೇಕಾಗಿತ್ತು.

‘ನೋಡು ಪಾಂಬು. ಇದು ನಮಗೆ ಒಳ್ಳೆಯದಲ್ಲ. ನಾವು ಪೊಲೀಸರನ್ನು ಎದುರು ಹಾಕಿಕೊಂಡರೆ ನಾಳೆ ನಮ್ಮ ವೈಯಕ್ತಿಕ ಕೆಲಸಗಳಿಗೆ ಅವರ ನೆರವು ಸಿಗಲಾರದು. ಯಾರದೋ ಕೇಸ್‌ನಲ್ಲಿ ನೀನೇಕೆ ಭಾಗಿಯಾಗಬೇಕು? ದುಡ್ಡು ಈ ಕೈಯಲ್ಲಿ ಬರುತ್ತೆ ಆ ಕೈಯಿಂದ ಹೋಗುತ್ತೆ’ ಸುಬಗನಂತೆ ಹೇಳಿದ್ದ.

ಪಾಂಬು ಆಗ ಅವನ ಮಾತನ್ನು ತಳ್ಳಿ ಹಾಕಿದ್ದ.

‘ಮುತ್ತುಚಾಂಡಿ, ಹಿತೇಶ ನಮಗೆ ಹಾಲು ಕರೆಯೋ ಹಸುವಿದ್ದ ಹಾಗೆ. ಅವನನ್ನು ರಕ್ಷಿಸಿ ಪೊಲೀಸರಿಗೆ ಸುಳ್ಳು ಹೇಳಿ ಹಣ ಗಳಿಸ್ಬಹುದು. ಇದಕ್ಕೆ ಕಾಕುಟ್ಟ ಕೂಡ ಬೆಂಬಲಕ್ಕಿದ್ದಾನೆ’

‘ನಿನಗೆ ಖುಷಿ ಬಂದ ಹಾಗೆ ಮಾಡು. ಆದರೆ ಹಿತೇಶನ ವಿಷಯದಲ್ಲಿ ನಾಳೆ ನೀನು ಏನಾದರೂ ಅನುಭವಸಬೇಕಾದ ಸಂದರ್ಭದಲ್ಲಿ ನನ್ನ ಸಹಾಯ ಕೇಳ್ಬೇಡ’ ಖಡಾಖಂಡಿತವಾಗಿ ನುಡಿದ ಮೇಲೆ ಪಾಂಬು ಅವನನ್ನು ನಿಂದಿಸಿದ್ದ.

‘ಹಣದ ವಿಷಯದಲ್ಲಿ ನೀನು ಬಾಯಿ ಬಿಡ್ತೀಯಾ. ಇಂತಹ ಸುಲಭದ ಹಣವನ್ನು ನಿರಾಕರಿಸಿ ನೀನು ಒಳ್ಳೆಯವನೆನಿಸಿಕೊಳ್ಳುವುದು ಯಾರಿಗಾಗಿ?’

ಮುತ್ತುಚಾಂಡಿಗೆ ಅವನ ಮಾತು ಹಿಡಿಸಲಿಲ್ಲ. ಇಂತಹ ಮೋಸದ ವಿಷಯದಲ್ಲಿ ಸಿಕ್ಕಿಹಾಕಿಕೊಂಡು ಕೆಲವು ಬಾರಿ ಜೈಲು ಸೇರಿದ್ದ ಮುತ್ತುಚಾಂಡಿ. ಈಗಲೂ ಅಂತಹ ದಂಧೆಯಿದ್ದರೂ ಅನಗತ್ಯ ಪೊಲೀಸರನ್ನು ಎದುರು ಹಾಕಿಕೊಳ್ಳಲಾರ.

ಮುತ್ತುಚಾಂಡಿಯಿಂದ ಇದೇ ವಿಷಯಕ್ಕೆ ಸರಿಯಾಗಿ ಬೈಸಿಕೊಂಡಿದ್ದ. ಕೊನೆಗೆ ಹಳೇ ಕಟ್ಟಡದಲ್ಲಿರುವ ಅವನ ಮನೆಗೆ ಭುಜಂಗೇಶರಾಯರಿಗೆ ಪತ್ರ ಬರೆದು ಹಣವನ್ನು ತರುವಂತೆ ಡಿಮ್ಯಾಂಡು ಮಾಡಿದ್ದ. ಅದೂ ಲಹರಿಯ ಕಣ್ಮರೆಯ ಸುಳಿವು ನೀಡುವ ಉದ್ದೇಶದಿಂದ.

ಪ್ರಸ್ತುತ ಆ ವಿಷಯಗಳೆಲ್ಲಾ ಪೊಲೀಸರ ಕೈಯಲ್ಲಿದೆ. ಪಾಂಬು ನಿಜವಾಗಿಯೂ ಒಂದು ಅನೂಹ್ಯ ಕೋಟೆಯೊಳಗೆ ಬಂಧಿಯಾಗಿ ಉಳಿದ. ಇದು ಅವನ ಗಮನಕ್ಕೂ ಬಾರದ ವಿಷಯ.

ಮೇನಕಾಳಿಂದ ಮಾಹಿತಿ ಪಡೆದುಕೊಂಡ ಇನ್ಸ್‌ಪೆಕ್ಟರ್ ರಾಜಧಾನಿ ತನಗೆ ಪರಿಚಿತವಾಗಿರುವ ಹಳೆಯ ಕಾಲದ ಕಟ್ಟಡಕ್ಕೆ ಬರುವಾಗ ಅದೇ ಕಟ್ಟಡದ ಮುಂದೆ